ಬೆಳ್ಳಗಾಯಿತು. ಶೇವ್ ಮಾಡಿಕೊಳ್ಳದೇ ಗಡ್ಡ ಬೆಳೆದುಬಿಟ್ಟಿತ್ತು. ಸುಮತಿಯ ಜೊತೆಯಲ್ಲಿ ಸಾಧಾರಣ ಮಾತು ಕತೆ ಕೂಡ ಅವನಿಗೆ ಭಯ ಅನ್ನಿಸಿಬಿಟ್ಟಿತು. ಮೊದಲೆಲ್ಲ ಸಣ್ಣ ಪುಟ್ಟ ಜೋಕ್‌ಗಳನ್ನ ಮಾಡುತ್ತ ಅವಳನ್ನ ರೇಗಿಸುತ್ತಿದ್ದ. 'ಪುಟ್ಟೀ ನಿಮ್ಮಮ್ಮನ್ನ ನೋಡಿದ್ದೇನೇ?' ಅಂದರೆ 'ಅಮ್ಮ ಇಲ್ಲೇ ಇದ್ದಾರಲ್ಲಪ್ಪ!' ಎಂದು ಅವಳು ತೋರಿಸುತ್ತಿದ್ದರೆ, 'ಓ... ಹೌದಲ್ಲವಾ. ನಾನೆಲ್ಲೋ ಮುಂದಿನ ಬೀದೀಲಿರೋ ಸುಶೀಲಮ್ಮ ಅಂದುಕೊಂಡೆ' ಎಂದು 60 ವರ್ಷದ ಮಹಿಳೆಗೆ ಹೋಲಿಸುತ್ತಿದ್ದ. ಕೆಲವು ಸಲ ಸುಮತಿ ಮದುವೆಗೋ, ಗೃಹಪ್ರವೇಶಕ್ಕೋ ಚೆನ್ನಾಗಿ ಅಲಂಕರಿಸಿಕೊಂಡಿದ್ದಾಗ 'ಇವತ್ತು ಹುಷಾರಾಗಿ ಹೋಗಿಬರಬೇಕಪ್ಪ. ನನ್ನ ಜೊತೇನೇ ಇರೆ. ಯಾರಾದ್ರೂ ಹಾರಿಸಿಕೊಂಡು ಹೋದಾರು' ಅನ್ನುತ್ತಿದ್ದ. ಅವಳು ಪಲ್ಯಕ್ಕೆ ಒಗ್ಗರಣೆ ಹಾಕಿದರೆ 'ಬಿಸಿಬೇಳೇಬಾತ್ ವಾಸನೆ ಬರುತ್ತಿದೆ' ಅನ್ನುತ್ತಲೋ, ಕಾಫಿ ಡಿಕಾಕ್ಷನ್ ಹಾಕಿದಾಗ 'ಆಹಾ... ಈ ವಾಸನೆಗೆ ಹೆಂಡದ ವಾಸನೆ ಮೈಲಿ ದೂರ ಹೋಗುತ್ತೆ' ಅನ್ನುತ್ತಲೋ... ಗೇಲಿ ಮಾಡುತ್ತಿದ್ದ. ಮಕ್ಕಳು ಅವನ ಮಾತಿಗೆ ನಗುತ್ತಾ ಎಂಜಾಯ್ ಮಾಡಿದರೆ ಅವಳು ಮಾತ್ರ 'ಸ್ವಲ್ಪ ಸುಮ್ಮನೆ ಇರ್ತೀರಾ' ಅಂತಲೋ ಅಥವಾ 'ಈಗೇನು ಹೀಗೇ ಮಾತಾಡ್ತ ಇರ್ತೀರೋ ಅಥವಾ...' ಅನ್ನುತ್ತಿದ್ದಳು. ಈಗ ಈ ಪ್ರಕರಣ ಆದ ನಂತರ ಅವನಿಗೆ ಯಾವ ಜೋಕ್ ಅನ್ನೂ ಮಾಡಲು ಆಗುತ್ತಿಲ್ಲ.

ಸತೀಶ್ ಆಗಾಗ ಹೇಳುತ್ತಿದ್ದ 'ಮಕ್ಕಳು ಬೇಗ ಬೆಳೆದು ಬಿಡುತ್ತಾರೆ. ನಮ್ಮ ಮಾತೇ ಅವರಿಗೆ ಬೇರೆ ತರಹ ಕೇಳಿಸುತ್ತೆ. ನಾವು ಮಾತ್ರ ಅವರಿನ್ನೂ ಮಕ್ಕಳು ಅಂತ

